ಅಧ್ಯಕ್ಷರು.—ಈಗ ತಡೆಹಿಡಿಯಲಾದ ಪ್ರಶ್ನೆ, ಮಾನ್ಯಸದಸ್ಯರಾದ ಎಸ್. ಕೆ. ಕಾಂತರವರು ಪ್ರಶ್ನೆ ಕೇಳಿ.

ಶ್ರೀ ಕೆ.ಬಿ. ಶಾಣಪ್ಪ.— ಮಾನ್ಯ ಸದಸ್ಯರಾದ ಎಸ್. ಕೆ. ಕಾಂತರವರು ಪ್ರಶ್ನೆಯನ್ನು ನಾನು ಕೇಳಲಿಕ್ಕೆ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಶಾಣಪ್ಪನವರು ಇಲ್ಲದಿದ್ದರೆ ಅಧ್ಯಕ್ಷರು ತಾವೇ ಪ್ರಶ್ನೆ ಕೇಳಬಹುದು.

ಅಧ್ಯಕ್ಷರು.—ಪ್ರಶ್ನೋತ್ತರವೇಳೆ ಮುಗಿದ ಮೇಲೆ ನಾನು ಪ್ರಶ್ನೆ ಕೇಳಲಿಕ್ಕೆ ಅಧಿಕಾರ ಇಲ್ಲ. ಈಗ ಪ್ರಶ್ನೋತ್ತರ ವೇಳೆ ಮುಗಿದಿದೆ. ಆದರೂ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಬಹುದು.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯಸದಸ್ಯರಾದ ಕಾಂತರವರ ಹೆಸರಿನಲ್ಲಿರುವ ಪ್ರಶ್ನೆಯನ್ನು ಕೇಳುತ್ತೇನೆ.

ಹುಬ್ಬಳ್ಳಿ ಮತ್ತು ಗುಲ್ಬರ್ಗದ ಕಾರ್ಮಿಕ ನ್ಯಾಯಾಲಯಗಳ ಬಗ್ಗೆ

೨೬೩. ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಮತ್ತು ಗುಲ್ಬರ್ಗಾದ ಕಾರ್ಮಿಕ ನ್ಯಾಯಾಲಯದಲ್ಲಿ ಅತಿ ಹೆಚ್ಚಿನ ಕೆಲಸದ ಕೊರತೆಯಿಂದಾಗಿ ಪೂರ್ತಿಯಾಗಿ ತೀರ್ಮಾನವಾಗದೆ ಇರುವ ಪ್ರಕರಣಗಳೆಷ್ಟು? ಹಾಗೂ ಈಗಾಗಲೇ ತೀರ್ಮಾನವಾಗಿರುವ ಪ್ರಕರಣಗಳೆಷ್ಟು ಹಾಗೂ ತೀರ್ಮಾನವಾಗಲು ತೆಗೆದುಕೊಂಡ ಕಾಲಾವಧಿ ಎಷ್ಟು?

ಆ) ಸದರಿ ಪ್ರಕರಣಗಳು ತೀರ್ಮಾನವಾಗದೆ ಇಂದರೆ, ಒಂದು, ಎರಡು, ಮೂರು, ನಾಲ್ಕು ಹಾಗೂ ಐದು ವರ್ಷಗಳಿಗೆ ಸಂಬಂಧಿಸಿದಂತೆ ವಿವರಣೆ ನೀಡುವುದು.

ಇ) ಸದರಿ ವಿಳಂಬಕ್ಕೆ ಕಾರಣಗಳೇನು? ಹಾಗೂ ಅದನ್ನು ತ್ವರಿತಗೊಳಿಸಲು ಕೈಕೊಂಡ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—

ಅ) ಹುಬ್ಬಳ್ಳಿ ಮತ್ತು ಗುಲ್ಬರ್ಗಾದ ಕಾರ್ಮಿಕ ನ್ಯಾಯಾಲಯಗಳಲ್ಲಿ ಪೂರ್ತಿಯಾಗಿ ತೀರ್ಮಾನವಾಗದೆ ಇರುವ ಪ್ರಕರಣಗಳ ಒಟ್ಟು ಸಂಖ್ಯೆ	ಕಾರ್ಮಿಕ ನ್ಯಾಯಾಲಯ ಹುಬ್ಬಳ್ಳಿ ೬೭೧	ಕಾರ್ಮಿಕ ನ್ಯಾಯಾಲಯ ಗುಲ್ಬರ್ಗ ೨೩೩
ಈಗಾಗಲೇ ತೀರ್ಮಾನವಾಗಿರುವ ಪ್ರಕರಣಗಳು ಹಾಗೂ ತೀರ್ಮಾನವಾಗಲು ತೆಗೆದುಕೊಂಡ ಕಾಲಾವಧಿ	೪೦೫ ಸಾಮಾನ್ಯವಾಗಿ ಪ್ರತಿಯೊಂದು ಪ್ರಕರಣ ತೆಗೆದುಕೊಂಡ ಕಾಲಾವಧಿ ಒಂದರಿಂದ ಎರಡು ವರ್ಷಗಳು.	೪೬

೮) ಸದರಿ ಪ್ರಕರಣಗಳು ತೀರ್ಮಾನವಾಗದೆ ಅಂದರೆ ಒಂದು, ಎರಡು, ಮೂರು, ನಾಲ್ಕು ಹಾಗೂ ಐದು ವರ್ಷಗಳಿಗೆ ಸಂಬಂಧಿಸಿದಂತೆ ವಿವರಗಳು ಈ ಕೆಳಕಂಡಂತಿವೆ.

	ಕಾರ್ಮಿಕ ನ್ಯಾಯಾಲಯ, ಹುಬ್ಬಳ್ಳಿ			ಕಾರ್ಮಿಕ ನ್ಯಾಯಾಲಯಂ, ಗುಲ್ಬರ್ಗ.		
	ತೀರ್ಮಾನ ವಾಗದೆ ಇದ್ದ ಪ್ರಕರಣಗಳು	ತೀರ್ಮಾನ ವಾದ ಪ್ರಕರಣಗಳು	ಉಳಿದ ಪ್ರಕರಣಗಳು	ತೀರ್ಮಾನ ವಾಗದೆ ಇದ್ದ ಪ್ರಕರಣಗಳು	ತೀರ್ಮಾನ ವಾದ ಪ್ರಕರಣಗಳು	ಉಳಿದ ಪ್ರಕರಣಗಳು
೧೯೮೧	೨೨೭	೧೪೬	೮೧	೯೪	—	೯೪
೧೯೮೨	೨೫೧	೧೪೭	೧೦೪	೩೬	—	೩೬
೧೯೮೩	೧೯೮	೭೧	೧೨೭	೨೭	—	೨೭
೧೯೮೪	೧೬೨	೨೭	೧೩೫	೩೯	೨೦	೧೯
೧೯೮೫	೨೩೮	೧೪	೨೨೪	೮೩	೨೬	೫೭
	೧೦೭೬	೪೦೫	೬೭೧	೨೭೯	೪೬	೨೩೩

೧) ಕಾರ್ಮಿಕ ನ್ಯಾಯಾಲಯಗಳು, ಸಿ.ಪಿ.ಸಿ.ನಲ್ಲಿರುವ ವಿಧಾನವನ್ನು ಅನುಸರಿಸಬೇಕಾಗಿರುವುದರಿಂದ ತೀರ್ಮಾನವನ್ನು ನೀಡಲು ಹೆಚ್ಚು ಸಮಯ ಬೇಕಾಗಿರುತ್ತದೆ. ಆದರೂ ಪ್ರಕರಣಗಳ ತೀರ್ಮಾನಗಳನ್ನು ತ್ವರಿತಗೊಳಿಸಲು ಅಧ್ಯಕ್ಷಾಧಿಕಾರಿಗಳಿಗೆ ಸೂಚನೆಯನ್ನು ಕಳುಹಿಸಲಾಗಿದೆ.

೧೨–೩೦ ಪಿ. ಎಂ.

ಶ್ರೀ ಪಲ್ಲಿಕಾರ್ಜುನ ಎಂ. ಖರ್ಗೆ.—ಗುಲ್ಬರ್ಗದಲ್ಲಿ ನೂರಾರು ಕೇಸುಗಳು ಕೋರ್ಟಿನಲ್ಲಿ ಪೆಂಡಿಂಗ್ ಇವೆ. ಒಂದು ಕೇಸಿನ ವಿಚಾರದಲ್ಲಿ ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ನಾನು ತಂದಿದ್ದೇನೆ. ಉಪೇಂದ್ರ ಅಂಡ್ ಅದರ್ಸ್ ಎಂಬ ಕೇಸು ಕಳೆದ ೪ ವರ್ಷಗಳಿಂದಲೂ ಪೆಂಡಿಂಗ್ ಇದೆ. ಎಲ್ಲಿಯವರೆವಿಗೂ ಅಲ್ಲಿರತಕ್ಕ ಡೆಪ್ಯುಟಿ ಲೇಬರ್ ಕಮೀಷನರ್ ಕೂಡ ತೀರ್ಮಾನ ಕೊಡುತ್ತಿಲ್ಲ. ಅವರು ಅದನ್ನು ಸರ್ಕಾರಕ್ಕೂ ಕೂಡ ರೆಫರ್ ಮಾಡಿಲ್ಲ. ಅವರಲ್ಲೇ ಪೆಂಡಿಂಗ್ ಇಟ್ಟುಕೊಂಡಿದ್ದಾರೆ, ಅವುಗಳನ್ನು ಎನ್‌ಕ್ವೈರಿ ಮಾಡುವುದರಲ್ಲಿ ನಿಧಾನವಾಗಿದ್ದರೂ ಅವರುಗಳನ್ನು ರೀ–ಇನ್‌ಸ್ಟೇಟ್ ಮಾಡುವುದಕ್ಕೆ ಸರ್ಕಾರವಾಗಲೀ, ಅಥವಾ ನ್ಯಾಷನಲ್ ಟಿಕ್ಸ್‌ಟೈಲ್ಸ್‌ರವರಾಗಲಿ ಯಾರಿಲ್ಲ. ಕಳೆದ ೫ ವರ್ಷಗಳಿಂದಲೂ ಸುಮಾರು ೧೬–೧೮ ನೌಕರರು ಕೆಲಸವಿಲ್ಲದೆ ಇದ್ದಾರೆ, ಅವರೆಲ್ಲರೂ ಹರಿಜನ–ಗಿರಿಜನರು ಇದ್ದಾರೆ, ಅವರಿಗೆ ಭೂಮಿ ಇಲ್ಲ. ಅವರೆಲ್ಲರೂ ಲ್ಯಾಂಡ್‌ಲೆಸ್ ಪೀಪಲ್ಸ್. ಅದಕ್ಕಾಗಿ ತಾವು ಈ ಕೇಸನ್ನು ಬೇಗನೆ ತೀರ್ಮಾನ ಮಾಡಬೇಕೆಂದು ಅಲ್ಲಿರತಕ್ಕ ಡೆಪ್ಯುಟಿ ಲೇಬರ್ ಕಮಿಷನರ್ ರವರಿಗೆ ಒಂದು ವಿಶಿಷ್ಟವಾದ, ಇಷ್ಟೇ ಸಮಯದಲ್ಲಿ ಆಗಬೇಕೆಂಬ ಆದೇಶವನ್ನು ತಾವು ಕೊಡುತ್ತೀರಾ? ಹಾಗೆ ಆಗದಿದ್ದರೆ ಅವರನ್ನೇ ಮಿದ್ದಾಗಿ ಇಲ್ಲಿಗೆ ಕರೆಯಿಸಿ ಕನ್ಸಿಲೇಷನ್ ಮಾಡಿ ಈ ಕೇಸನ್ನು ಸೆಟ್ಲ್‌ಮೆಂಟ್ ಮಾಡುತ್ತೀರಾ?

ಶ್ರೀ ಡಿ. ಮಂಜುನಾಥ್.—ಈ ಪ್ರಶ್ನೆಯಲ್ಲಿ ಲೇಬರ್ ಕೋರ್ಟಿನಲ್ಲಿ ಎಷ್ಟು ಕೇಸುಗಳು ಪೆಂಡಿಂಗ್ ಇವೆ ಎಂಬುದನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಒದಗಿಸಿ ಕೊಟ್ಟಿದ್ದೇನೆ. ಆದರೆ ಮಾನ ಸದಸ್ಯರಾದ ಶ್ರೀ ಪಲ್ಲಿಕಾರ್ಜುನ ಎಂ. ಖರ್ಗೆಯವರು ಏನೊಂದು ವಿಚಾರವನ್ನು ಹೇಳಿದ್ದಾರೆ, ಅದನ್ನು ನಾನು ವಿಚಾರಣೆ ಮಾಡಿ ಇತ್ಯರ್ಥ ಮಾಡುತ್ತೇನೆ.